REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 | ಸಂಚಿಕೆ : 08 | ಜೂನ್ 1, 2022 | ಬುಧವಾರ | ಪುಟಗಳು : 8 | ಬೆಲೆ : 2/-

## ದಾವಾ ಪ್ರಕರಣಗಳನ್ನು ದಾಖಲಿಸಲು ಅನುಸರಿಸಬೇಕಾದ ಅಂಶಗಳ ಕುರಿತು ಬೆಳಗಾವಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಒಂದು ದಿನದ ಸಭೆ



**ಬೆಳಗಾವಿ :** ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿಯ ದಾವಾ ಪಂಚಾಯಿತಿ ನ್ಯಾಯಾಲಯವು ಬೆಳಗಾವಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಬ್ಯಾಂಕಿನ ದಾವಾ ಪ್ರಕರಣ ದಾಖಲಿಸುವ ಬಗ್ಗೆ ಅನುಸರಿಸಬೇಕಾದ ಅಂಶಗಳ ಕುರಿತು ದಿನಾಂಕ : 24.05.2022ರಂದು ಒಂದು ದಿನದ ಸಭೆಯನ್ನು ಬೆಳಗಾವಿ ಶ್ರೀ ಬಸವೇಶ್ವರ ಸಹಕಾರ ಬ್ಯಾಂಕಿನಲ್ಲಿ ಏರ್ಪಡಿಸಲಾಗಿತ್ತು.

ಈ ಸಭೆಯ ಅಧ್ಯಕ್ಷತೆಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441) ಹಾಗೂ ಪೀಠಾಧಿಕಾರಿಗಳಾದ ಶ್ರೀ ಕಲ್ಲಪ್ಪ ಓಬಣ್ಣಗೋಳ ವಹಿಸಿ ಬ್ಯಾಂಕಿನ ದಾವಾ ಪ್ರಕರಣಗಳನ್ನು ದಾಖಲಿಸುವಾಗ ದಾವಾ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳ ಬಗ್ಗೆ ವಿವರವಾಗಿ ತಿಳಿಸಿದರು.

ಸಾಲ ನೀಡುವಾಗ ಬ್ಯಾಂಕಿನ ಉಪನಿಯಮ ಸಾಲದ ನಿಯಮಗಳನ್ನು ಪರಿಶೀಲಿಸುವುದು ಮತ್ತು ಸಾಲ ನೀಡುವ ಮುಂಚೆ ಸಾಲ ಮರುಪಾವತಿಯ ಕುರಿತು ಸಾಲಗಾರನ ಬಗ್ಗೆ ಸವಿಸ್ತಾರವಾಗಿ ವಿವರ ತಿಳಿದುಕೊಂಡು ಸಾಲ ಮಂಜೂರಾತಿಗೆ ಕ್ರಮವಿಡುವುದು ಸೂಕ್ತವೆಂದು ತಿಳಿಸಿದರು.

ಬ್ಯಾಂಕಿನಿಂದ ಮಂಜೂರಾದ ಸಾಲವು ಸಾಲಗಾರರಿಂದ ಪೂರ್ತಿ ಹಣ ವಸೂಲಾಗುವವರೆಗೆ ಮುಖ್ಯಕಾರ್ಯನಿರ್ವಹಣಾಧಿಕಾರಿ ಯವರ ಜವಾಬ್ದಾರಿ ಇರುತ್ತದೆ. ತಮ್ಮ ಹಂತದಲ್ಲಿ ವಸೂಲಾಗದಿದ್ದ ಪಕ್ಷದಲ್ಲಿ ಸಾಲ ಮರುಪಾವತಿಗೆ ಕಾನೂನು ಕ್ರಮವಿಟ್ಟು ವಸೂಲಾತಿ ಮಾಡುವುದು. ದಾವಾ ಪ್ರಕರಣವನ್ನು ದಾಖಲಿಸುವಾಗ ಸಹಕಾರ ಸಂಘಗಳ ಕಾಯ್ದೆಯಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ದಾವಾ ಪ್ರಕರಣ ದಾಖಲಿಸಲು ತಿಳಿಸಿದರು.

ಅಮಲ್ಜಾರಿ ಪ್ರಕರಣಗಳ ವಿಷಯ ಕುರಿತು ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳಾದ ಶ್ರೀ ಎಸ್.ಕೆ.ಸಜ್ಜನರವರು ಅನುಸರಿಸಬೇಕಾದ ದಾಖಲಾತಿ ಕಾನೂನುಗಳ ಬಗ್ಗೆ ವಿವರವಾಗಿ ತಿಳಿಸಿದರು.

ಪ್ರಾರಂಭದಲ್ಲಿ ಈ ಸಭೆಗೆ ಆಗಮಿಸಿದ ಬೆಳಗಾವಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ವೇದಿಕೆಯ ಮೇಲಿದ್ದ ಗಣ್ಯರನ್ನು ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ವಿಶ್ವನಾಥ ಬಿ ಕುಲಕರ್ಣಿ ಸ್ವಾಗತಿಸಿದರು. ಕೊನೆಯಲ್ಲಿ ಗೋಕಾಕ ಅರ್ಬನ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ಎಸ್. ಪಾಟೀಲರವರು ವಂದನಾರ್ಪಣೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿದ್ದರು.



2 ಕರ್ನಾಟಕಕ್ಕೆ ಹರಿದು ಬಂತು ರೂ. 65 ಸಾವಿರ ಕೋಟಿ ಬಂಡವಾಳ ಹೂಡಿಕೆ

4 ದಿನಾಂಕ : 25.06.2022ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯ ನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

7 ನಿಮ್ಮ ಪ್ರಶ್ನೆ – ನಮ್ಮ ಉತ್ತರ

## ಆತ್ಮೀಯ ಸಹಕಾರಿಗಳೇ...



### ಖೋಟಾ ನೋಟು ದಂಧೆ ಯಾವುದೇ ಅಡೆ ತಡೆ ಇಲ್ಲದೆ ಮುಂದುವರಿದಿರುವುದು ಆಘಾತಕಾರಿ ಸಂಗತಿಯಲ್ಲವೇ?

2021–22ನೇ ಸಾಲಿನ ಹಣಕಾಸು ವರ್ಷದಲ್ಲಿ ದೇಶದಲ್ಲಿ 500 ರೂ ಮತ್ತು 2,000 ರೂ. ಮುಖಬೆಲೆಯ ನೋಟುಗಳ ನಕಲಿ ಹಾವಳಿ ಭಾರಿ ಹೆಚ್ಚಾಗಿದೆ ಎಂದು ಆರ್‌ಬಿಐನ ಇತ್ತೀಚಿನ ವರದಿ ತಿಳಿಸಿದೆ. ಅಂದರೆ, ಈ ವರದಿಯ ಪ್ರಕಾರ ದೇಶದಲ್ಲಿ ನಕಲಿ ನೋಟುಗಳ ಹಾವಳಿ ಹೆಚ್ಚಾಗುತ್ತಲೇ ಇದೆ ಎಂದಾಗುತ್ತದೆ.

ಎಲ್ಲರಿಗೂ ನೆನಪಿರುವ ಹಾಗೆ, 2016ರ ನವೆಂಬರ್ 8ರ ರಾತ್ರಿ ಪ್ರಧಾನಮಂತ್ರಿಗಳು ರೂ. 500 ಮತ್ತು 1000 ನೋಟುಗಳು ಚಲಾವಣೆಯಿಂದ ತಕ್ಷಣದಿಂದಲೇ ರದ್ದುಗೊಂಡಿವೆ ಎಂದು ಘೋಷಿಸಿ, ಇದರಿಂದ ದೇಶದಲ್ಲಿನ ಕಪ್ಪುಹಣ, ನಕಲಿ ನೋಟಿನ ಹಾವಳಿಯನ್ನು, ಭಯೋತ್ಪಾದನೆಯನ್ನು, ಭ್ರಷ್ಟಾಚಾರ–ಹವಾಲದಂತಹ ದಂಧೆಗಳನ್ನು ಹೋಗಲಾಡಿಸುತ್ತದೆ ಎಂದು ಹೇಳಿದ್ದನ್ನು ಜನ ನಂಬಿದರು. ತಮಗೆ ಒದಗಿದ ಅಪಾರ ಕಷ್ಟ–ನಷ್ಟಗಳನ್ನು ಪರಿಗಣಿಸದೆ ಪ್ರಧಾನಮಂತ್ರಿಗಳನ್ನು ಬೆಂಬಲಿಸಿದ್ದರು.

ಆ ನಂತರ ಆರ್.ಬಿ.ಐ. ಖೋಟಾನೋಟು ಹಾವಳಿ ತಡೆಯಲೆಂದೇ ಅಧುನಿಕ ತಂತ್ರಜ್ಞಾನಾಧರಿತ ಸುಧಾರಿತ ಸೆಕ್ಯೂರಿಟಿ ಫೀಚರ್‌ಗಳನ್ನ ಅಳವಡಿಸಿದ ಹೊಸ ನೋಟುಗಳನ್ನ ಮುದ್ರಿಸಿ ಚಲಾವಣೆಗೆ ತರಲಾಗಿದ್ದು ಯಾವುದೇ ರೀತಿಯಲ್ಲೂ ಈ ನೋಟುಗಳನ್ನು ನಕಲು ಮಾಡಲು ಸಾಧ್ಯವಿಲ್ಲ ಎನ್ನುವ ಮಾತುಗಳನ್ನು ಅಂದು ಆರ್.ಬಿ.ಐ. ಹೇಳಿತ್ತು. ಆದರೇ, ಈಗಲೂ ಸಹ ಖೋಟಾನೋಟುಗಳ ಚಲಾವಣೆಯಾಗುತ್ತಿರುವುದು ಹಾಗೂ ಖೋಟಾ ನೋಟು ದಂಧೆ ಯಾವುದೇ ಅಡೆ ತಡೆ ಇಲ್ಲದೆ ನಿರಾಂತಕವಾಗಿಯೇ ಮುಂದುವರಿದಿರುವುದು ಆಘಾತಕಾರಿ ಸಂಗತಿಯಲ್ಲವೇ?

ದೇಶದ ಹಲವು ರಾಜ್ಯಗಳಲ್ಲಿ ಸೇರಿದಂತೆ ನಮ್ಮ ರಾಜ್ಯದ ಪ್ರಮುಖ ನಗರಗಳಿಗೂ ರೂ. 2000 ಹಾಗೂ ರೂ. 500ರ ಮುಖ ಬೆಲೆಯ ಖೋಟಾ ನೋಟುಗಳು ಎಲ್ಲೋ ಒಂದೆಡೆ ಮುದ್ರಣವಾಗಿ, ದೇಶದ ಎಲ್ಲ ಕಡೆ ಸರಬರಾಜಾಗುತ್ತಿದೆ ಎಂಬ ಸ್ಫೋಟಕ ಮಾಹಿತಿಯೂ ರಾಷ್ಟ್ರೀಯ ತನಿಖಾ ದಳದ ತನಿಖೆಯಿಂದ ಪತ್ತೆಯಾಗಿದೆ. ಖೋಟಾನೋಟು ಚಲಾವಣೆ ಪ್ರಕರಣದಲ್ಲಿ ನಾಲ್ವರನ್ನು ಬಂಧಿಸಿದ್ದ ಎನ್‌ಐಎ ಪೊಲೀಸರು, ತನಿಖೆ ವೇಳೆ ಆರೋಪಿಗಳಿಂದ ವಶಪಡಿಸಿಕೊಂಡಿದ್ದ ಡೈರಿ, ಬ್ಯಾಂಕ್ ಖಾತೆ ಮಾಹಿತಿ, ಎಟಿಎಂ ರಸೀದಿ, ದೂರವಾಣಿ ಕರೆಗಳ ವಿನಿಮಯದ ಮಾಹಿತಿ ಆಧಾರದಲ್ಲಿ ಖೋಟಾ ನೋಟು ಜಾಲ ಎಲ್ಲೆಡೆ ವ್ಯಾಪಕವಾಗಿ ಹರಡಿರುವುದೂ ಪತ್ತೆಯಾಗಿದೆ.

ಇತ್ತೀಚೆಗೆ ರೂ. 15.92 ಕೋಟಿ ರೂ. ಮೌಲ್ಯದ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಒಟ್ಟಾರೆ 1079 ಎಫ್‌ಐಆರ್‌ಗಳನ್ನು ದಾಖಲು ಮಾಡಿಕೊಂಡು 1067 ಜನರನ್ನು ಬಂಧಿಸಲಾಗಿದೆ ಎಂದು ಎನ್‌ಸಿಆರ್‌ಬಿ ಹೇಳಿದೆ. ರಾಜ್ಯವಾರು ಖೋಟಾ ನೋಟು ಹಾವಳಿ ಪ್ರಮಾಣವನ್ನು ಗಮನಿಸಿದಾಗ ಗುಜರಾತ್ ಮೊದಲ ಸ್ಥಾನದಲ್ಲಿದೆ.

ಅಪನಗದೀಕರಣದಿಂದ ಯಾವುದೇ ಪ್ರಯೋಜನವಿಲ್ಲ. ಅದರಿಂದ ಆರ್ಥಿಕತೆಗೆ ಬಾರೀ ಹೊಡೆತ ಬೀಳಲಿದೆ ಎಂದು ಬಹುತೇಕ ಆರ್ಥಿಕ ತಜ್ಞರು ಅಂದೇ ಅಭಿಪ್ರಾಯ ವ್ಯಕ್ತಪಡಿಸಿದ್ದರು ಅದು ಇಂದು ನಿಜವಾದಂತಿದೆ. ಅದೇನೇ ಇರಲಿ ಕೇಂದ್ರ ಸರ್ಕಾರ ಕೂಡಲೆ ಖೋಟಾ ನೋಟು ತಯಾರು ಮಾಡುವ ಖದೀಮರನ್ನು ಪತ್ತೆ ಹಚ್ಚಲು ಪೊಲೀಸ್ ಜಾಲವನ್ನು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಬೇಕಿದೆ. ದೇಶದ ಆರ್ಥಿಕತೆಗೆ ಕುಂದುಂಟು ಮಾಡುತ್ತಿರುವ ಈ ಬಗೆಯ ಕೃತ್ಯಗಳನ್ನು ತಡ ಮಾಡದೇ ಸದೆಬಡೆಯಬೇಕಿದೆ.

▸▸ ಎಚ್.ಕೆ. ಪಾಟೀಲ
ಅಧ್ಯಕ್ಷರು

## ವಿಶ್ವ ಆರ್ಥಿಕ ಶೃಂಗ ಸಭೆ : ಕರ್ನಾಟಕಕ್ಕೆ ಹರಿದು ಬಂತು ರೂ. 65 ಸಾವಿರ ಕೋಟಿ ಬಂಡವಾಳ ಹೂಡಿಕೆ



ದಾವೋಸ್‌ನ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಕರ್ನಾಟಕದಲ್ಲಿ ಸುಮಾರು 65 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆ ಆಕರ್ಷಿಸಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿವರಿಸಿದರು.

- ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಆಕರ್ಷಿಸಲು ಹಲವು ಜಾಗತಿಕ ಉದ್ದಿಮೆದಾರರನ್ನು ಭೇಟಿಯಾಗಿ ಮಾತುಕತೆ ನಡೆಸಲಾಯಿತು.
- ರಾಜ್ಯದಲ್ಲಿ ಒಟ್ಟು 52 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲು ಎರಡು ಸಂಸ್ಥೆಗಳೊಂದಿಗೆ ಸರ್ಕಾರ ಒಪ್ಪಂದಕ್ಕೆ ಸಹಿ ಮಾಡಿದೆ.
- ಕರ್ನಾಟಕ ಬಂಡವಾಳ ಆಕರ್ಷಣೆಯಲ್ಲಿ ಮುಂಚೂಣಿಯಲ್ಲಿದ್ದು, ವಿಶ್ವ ಆರ್ಥಿಕ ಶೃಂಗ ಸಭೆ ಫಲಪ್ರದವಾಗಿದೆ.
- ಇತ್ತೀಚಿನ ದಿನಗಳಲ್ಲಿ ರಾಜ್ಯಕ್ಕೆ ಹರಿದು ಬರುತ್ತಿರುವ ಬಹುದೊಡ್ಡ ಮೊತ್ತದ ಬಂಡವಾಳ ಇದಾಗಿದೆ
- ಈ ಹೂಡಿಕೆಗಳು ವಿಶ್ವದ ದೊಡ್ಡ ಕಂಪನಿಗಳು ಕರ್ನಾಟಕ ರಾಜ್ಯದ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸದ ದ್ಯೋತಕವಾಗಿದೆ.
- ರೆನ್ಯೂ ಪವರ್ ಪ್ರೈ.ಲಿ. ಕಂಪೆನಿಯು 50 ಸಾವಿರ ಕೋಟಿ ರೂ.ಗಳ ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಂಡಿದ್ದು, ಮುಂದಿನ 7 ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ, ಬ್ಯಾಟರಿ ಸ್ಟೋರೇಜ್, ಗ್ರೀನ್ ಹೈಡ್ರೋಜನ್ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. 30 ಸಾವಿರಕ್ಕೂ ಹೆಚ್ಚು ಉದ್ಯೋಗವನ್ನು ನೀಡಲಿದೆ.
- ಎರಡು ಹಂತಗಳಲ್ಲಿ ಅನುಷ್ಠಾನಗೊಳ್ಳುವ ಯೋಜನೆ ಇದಾಗಿದ್ದು, ಮೊದಲ ಹಂತದಲ್ಲಿ ಈಗಾಗಲೇ ಜಾರಿಯಲ್ಲಿರುವ ಯೋಜನೆಗಳಿಗೆ 11900 ಕೋಟಿ ರೂ.ಗಳ ಬಂಡವಾಳ ಹೂಡಿ, ಮುಂದಿನ 2 ವರ್ಷಗಳಲ್ಲಿ ಯೋಜನೆಗಳು ಕಾರ್ಯಾರಂಭ ಮಾಡಲಿವೆ.
- ಎರಡನೇ ಹಂತದಲ್ಲಿ ನವೀಕರಿಸಬಹುದಾದ ಇಂಧನ ಹಾಗೂ ಗ್ರೀನ್ ಹೈಡ್ರೋಜನ್ ಘಟಕಗಳನ್ನು ಮುಂದಿನ 5 ವರ್ಷಗಳಲ್ಲಿ ಸ್ಥಾಪಿಸಲು 37500 ಕೋಟಿ ರೂ.ಗಳ ಬಂಡವಾಳವನ್ನು ಹೂಡಿಕೆ ಮಾಡಲಾಗುತ್ತದೆ.

## 2024ರ ವೇಳೆಗೆ ಹಳಿಗೆ ಮರಳಲಿದೆ ಅಭಿವೃದ್ಧಿ ಹೊಂದಿದ ಆರ್ಥಿಕತೆ : ಗೀತಾ ಗೋಪಿನಾಥ್



**ದಾವೋಸ್ :** ಅಭಿವೃದ್ಧಿ ಹೊಂದಿದ ಆರ್ಥಿಕತೆಗಳು 2024ರ ವೇಳೆಗೆ ಹಳಿಗೆ ಮರಳಲಿವೆ. ಆದರೆ, ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಬೆಳವಣಿಗೆಯು ಕೋವಿಡ್‌ಗೂ ಮುಂಚಿನ ಮಟ್ಟಕ್ಕಿಂತ ಶೇಕಡ 5ರಷ್ಟು ಕಡಿಮೆ ಇರಲಿದೆ ಎಂದು ಅಂತರ ರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಒಂದನೇ ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕದಿಂದಾಗಿ ಜಾಗತಿಕ ಆರ್ಥಿಕತೆಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದ್ದು, ಈಗ ನಿಧಾನವಾಗಿ ಚೇತರಿಕೆ ಹಾದಿಗೆ ಮರಳುತ್ತಿವೆ. ರಷ್ಯಾ-ಉಕ್ರೇನ್ ಸಂಘರ್ಷವು ಜಾಗತಿಕ ಆರ್ಥಿಕ ಚೇತರಿಕೆಗೆ ಅತಿದೊಡ್ಡ ಹಿನ್ನಡೆ ಆಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯಲ್ಲಿ, ಜಾಗತಿಕ ಬೆಳವಣಿಗೆಯ ಕುರಿತಾದ ವಿಶೇಷ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಗರಿಷ್ಠ ಮಟ್ಟದಲ್ಲಿರುವ ಹಣದುಬ್ಬರವನ್ನು ನಿಯಂತ್ರಿಸುವ ಪ್ರಯತ್ನದ ಭಾಗವಾಗಿ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಿಸುತ್ತಿವೆ.

ಅದರ ಅಗತ್ಯವೂ ಇದೆ. ಆದರೆ, ಜಾಗತಿಕ ಹಣಕಾಸು ಮತ್ತು ವ್ಯಾಪಾರದ ಮೇಲೆ ಬಡ್ಡಿದರ ಏರಿಕೆಯು ಪರಿಣಾಮ ಉಂಟುಮಾಡುತ್ತಿದೆ ಎಂದು ಅವರು ಹೇಳಿದ್ದಾರೆ.

## ರೂ.2000 ನೋಟುಗಳ ಸಂಖ್ಯೆ ಭಾರೀ ಇಳಿಕೆ ! ಎಲ್ಲೂ ಸಿಗ್ತಿಲ್ಲ ಈ ನೋಟು

**ಹೊಸದಿಲ್ಲಿ :** ಕಳೆದ ಕೆಲ ವರ್ಷಗಳಿಂದ ರೂ.2,000 ಮುಖಬೆಲೆಯ ನೋಟುಗಳ ಸಂಖ್ಯೆಯಲ್ಲಿ ನಿರಂತರ ಕುಸಿತ ಕಂಡುಬಂದಿದೆ. ಈ ವರ್ಷದ ಮಾರ್ಚ್ ಅಂತ್ಯದ ವೇಳೆಗೆ, ಒಟ್ಟು ಕರೆನ್ಸಿ ನೋಟುಗಳಲ್ಲಿ ರೂ.2000 ಮುಖಬೆಲೆಯ ಪಾಲು ಶೇ.1.6ಕ್ಕೆ ಇಳಿದಿದೆ. ಅಂದರೆ 2 ಸಾವಿರ ಮುಖಬೆಲೆಯ 214 ಕೋಟಿ ನೋಟುಗಳು ಚಲಾವಣೆಯಲ್ಲಿವೆ. ಇತ್ತೀಚೆಗೆ ಬಿಡುಗಡೆಯಾದ ವಾರ್ಷಿಕ ವರದಿಯಲ್ಲಿ ಈ ಕುರಿತು ಮಾಹಿತಿ ನೀಡಲಾಗಿದೆ.




**ನೋಟುಗಳ ಅಂಕಿ-ಸಂಖ್ಯೆ :** 2022ರ ಮಾರ್ಚ್‌ರವರೆಗೆ ಎಲ್ಲಾ ಮುಖಬೆಲೆಯ ನೋಟುಗಳ ಒಟ್ಟು ಸಂಖ್ಯೆ 13,053 ಕೋಟಿಯಷ್ಟಿದೆ. ಒಂದು ವರ್ಷದ ಹಿಂದೆ ಇದೇ ಅವಧಿಯಲ್ಲಿ ಈ ನೋಟುಗಳ ಪ್ರಮಾಣ 12,437 ಕೋಟಿಯಷ್ಟಿತ್ತು. ಆರ್‌ಬಿಐ ವಾರ್ಷಿಕ ವರದಿಯ ಪ್ರಕಾರ, ಮಾರ್ಚ್ 2020ರ ಅಂತ್ಯದ ವೇಳೆಗೆ ಚಲಾವಣೆಯಲ್ಲಿರುವ 2000 ರೂಪಾಯಿ ಮುಖಬೆಲೆಯ ನೋಟುಗಳ ಸಂಖ್ಯೆ 274 ಕೋಟಿಯಷ್ಟಿದೆ. ಈ ಅಂಕಿ ಅಂಶವು ಚಲಾವಣೆಯಲ್ಲಿರುವ ಒಟ್ಟು ಕರೆನ್ಸಿ ನೋಟುಗಳ ಶೇಕಡಾ 2.4 ರಷ್ಟಿತ್ತು.

2021ರ ಮಾರ್ಚ್ ವೇಳೆಗೆ, ಚಲಾವಣೆಯಲ್ಲಿರುವ ರೂ.2000 ಮುಖಬೆಲೆಯ ನೋಟುಗಳ ಸಂಖ್ಯೆ 245 ಕೋಟಿಗೆ ಇಳಿಕೆಯಾಯಿತು. ಅಂದರೆ ಒಟ್ಟು ನೋಟುಗಳ ಸಂಖ್ಯೆಯಲ್ಲಿ ಶೇ.2ಕ್ಕೆ ಇಳಿಕೆಯಾಯಿತು. ಕಳೆದ ಹಣಕಾಸು ವರ್ಷದ ಅಂತ್ಯಕ್ಕೆ ಈ ಸಂಖ್ಯೆ ಮತ್ತಷ್ಟು ಕುಸಿದು 214 ಕೋಟಿಗೆ (ಶೇ.1.6ಕ್ಕೆ) ಇಳಿದಿದೆ.

ಮೇಲಿನ ಅಂಕಿ-ಅಂಶಗಳು ನೋಟುಗಳ ಶೇಕಡಾವಾರು ಪ್ರಮಾಣದಲ್ಲಿವೆ. ಆಯಾ ನೋಟುಗಳ ಒಟ್ಟು ಮೌಲ್ಯದ ಕುರಿತು ಹೇಳುವುದಾದರೆ, 2020ರ ಮಾರ್ಚ್‌ನಲ್ಲಿ ರೂ.2000 ಮುಖಬೆಲೆಯ ನೋಟಿನ ಒಟ್ಟು ಮೌಲ್ಯವು ಎಲ್ಲಾ ಮುಖಬೆಲೆಯ ನೋಟುಗಳ ಒಟ್ಟು ಮೌಲ್ಯದ ಶೇ.22.6ರಷ್ಟಿತ್ತು. ಆದರೆ, ಇದು 2021ರ ಮಾರ್ಚ್ ವೇಳೆಗೆ ಶೇ.17.3ಕ್ಕೆ ಮತ್ತು 2022ರ ಮಾರ್ಚ್ ವೇಳೆಗೆ ಶೇ.13.8ಕ್ಕೆ ಇಳಿಕೆಯಾಗಿದೆ.

**500 ರೂ. ಮುಖ ಬೆಲೆಯ ನೋಟುಗಳ ಹೆಚ್ಚಳ :** ಆರ್‌ಬಿಐ ವರದಿಯ ಪ್ರಕಾರ, 500 ರೂ. ಮುಖಬೆಲೆಯ ನೋಟುಗಳ ಸಂಖ್ಯೆಯು ಈ ವರ್ಷದ ಮಾರ್ಚ್ ಅಂತ್ಯಕ್ಕೆ 4,554.68 ಕೋಟಿಗೆ ಏರಿಕೆಯಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ರೂ.500 ಮುಖಬೆಲೆಯ ನೋಟುಗಳ ಸಂಖ್ಯೆ 3,867.90 ಕೋಟಿಯಷ್ಟಿತ್ತು. ಚಲಾವಣೆಯಲ್ಲಿರುವ ಒಟ್ಟು ನೋಟುಗಳ ಪೈಕಿ ರೂ.500ರ ನೋಟುಗಳ ಪಾಲು ಶೇ.34.9ರಷ್ಟಿದೆ. ಅಂದರೆ, ಚಲಾವಣೆಯಲ್ಲಿರುವ ನೋಟುಗಳ ಪೈಕಿ ರೂ.500ರ ನೋಟುಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಇದರ ನಂತರದ ಸ್ಥಾನದಲ್ಲಿ ರೂ.10 ಮುಖಬೆಲೆಯ ನೋಟುಗಳಿವೆ. ಇವು ಒಟ್ಟು ನೋಟುಗಳ ಪೈಕಿ ಶೇ.21.3 ರಷ್ಟಿವೆ. ಒಟ್ಟಾರೆ ಹೇಳುವುದಾದರೆ, ರೂ.2000 ಮುಖಬೆಲೆಯ ನೋಟುಗಳಲ್ಲಿ ಗಣನೀಯ ಕುಸಿತ ಆಗಿದ್ದು, ಸರ್ಕಾರದ ಮುಂದಿನ ನಡೆ ಏನಾಗಿರಬಹುದು ಎಂಬ ಪ್ರಶ್ನೆ ಮೂಡುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ವರದಿಯ ಪ್ರಕಾರ, ಎಲ್ಲಾ ಮುಖಬೆಲೆಯ ಚಲಾವಣೆಯಲ್ಲಿರುವ ಕರೆನ್ಸಿಯ ಒಟ್ಟು ಮೌಲ್ಯವು ಮಾರ್ಚ್ 2021ರಲ್ಲಿ 28.27 ಲಕ್ಷ ಕೋಟಿ ರೂಪಾಯಿ ಇತ್ತು. ಇದು ಈ ವರ್ಷದ (2022) ಮಾರ್ಚ್‌ನಲ್ಲಿ 31.05 ಲಕ್ಷ ಕೋಟಿ ರೂಪಾಯಿಗೆ ಏರಿಕೆಯಾಗಿದೆ.

ಚಲಾವಣೆಯಲ್ಲಿರುವ ನೋಟುಗಳ ಸಂಖ್ಯೆ (ಕೋಟಿಗಳಲ್ಲಿ)

ನೋಟು : 2021, 2022

ರೂ. 2,000 : 245, 214

ರೂ.500 : 3,867, 4,554


## ದಿನಾಂಕ : 25.06.2022 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ

# ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಎಸ್‌ಟಿಸಿಐ ಪ್ರೈಮರಿ ಡೀಲರ್ ಲಿ., ಇವರ ಸಹಯೋಗದೊಂದಿಗೆ ದಿನಾಂಕ : 25ನೇ ಜೂನ್ 2022ರ ಶನಿವಾರದಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆ.ಎಚ್.ರಸ್ತೆ, ಬೆಂಗಳೂರು–560027 ಇಲ್ಲಿ ಏರ್ಪಡಿಸಲಾಗಿದೆ.

ಈ ವಿಚಾರ ಸಂಕಿರಣದಲ್ಲಿ Fixed Income Markets in India-Current Trends, Themes & Perspectives. Investment Management. Credit Management. Recent RBI Issues ವಿಷಯಗಳ ಕುರಿತು ನುರಿತ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಈ ವಿಚಾರ ಸಂಕಿರಣದಲ್ಲಿ ಒಂದು ಬ್ಯಾಂಕಿನಿಂದ ಗರಿಷ್ಠ 3 ಜನರು ಭಾಗವಹಿಸಬಹುದಾಗಿದೆ. ಭಾಗವಹಿಸುವ ಪ್ರತಿನಿಧಿಗಳು ದಿನಾಂಕ : 22.06.2022 ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವಂತೆ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ತಿಳಿಸಿರುತ್ತಾರೆ.

## ಬೆಳವಣಿಗೆ ಅಂದಾಜು ತಗ್ಗಿಸಿದ ಮೂಡಿಸ್




**ನವದೆಹಲಿ :** ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸ್ ಸಂಸ್ಥೆಯು ಭಾರತದ ಆರ್ಥಿಕ ಬೆಳವಣಿಗೆ ದರವು 2022ರಲ್ಲಿ ಶೇ.8.8ರಷ್ಟು ಇರಲಿದೆ ಎಂದು ಹೇಳಿದೆ. ಬೆಳವಣಿಗೆ ದರವು ಶೇ.9.1ರಷ್ಟು ಆಗಲಿದೆ ಎಂದು ಸಂಸ್ಥೆಯು ಈ ಮೊದಲು ಅಂದಾಜಿಸಿತ್ತು. ಬೆಳವಣಿಗೆ ಅಂದಾಜನ್ನು ತಗ್ಗಿಸಿರುವುದಕ್ಕೆ ಪ್ರಮುಖ ಕಾರಣ ಹಣದುಬ್ಬರ ಹೆಚ್ಚಳ ಎಂದು ಸಂಸ್ಥೆ ಹೇಳಿದೆ.

ಕಚ್ಚಾತೈಲ, ಆಹಾರ ಉತ್ಪನ್ನಗಳು, ರಸಗೊಬ್ಬರ ಬೆಲೆ ಏರಿಕೆಯು ಕುಟುಂಬಗಳ ಖರ್ಚುಗಳ ಮೇಲೆ ಮುಂದಿನ ತಿಂಗಳುಗಳಲ್ಲಿ ಪರಿಣಾಮ ಉಂಟುಮಾಡಲಿದೆ. ಇಂಧನ ಹಾಗೂ ಆಹಾರ ವಸ್ತುಗಳ ಬೆಲೆ ಹೆಚ್ಚಳವು ಇನ್ನಷ್ಟು ವ್ಯಾಪಕವಾಗುವುದನ್ನು ತಡೆಯುವ ಉದ್ದೇಶದಿಂದ ರೆಪೊದರ ಹೆಚ್ಚಳ ಮಾಡಿರುವುದು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳವಾಗುವುದಕ್ಕೆ ಅಡ್ಡಿಯಾಗಲಿದೆ ಎಂದು ಸಂಸ್ಥೆ ಅಂದಾಜಿಸಿದೆ. 2023ರಲ್ಲಿ ಬೆಳವಣಿಗೆ ದರವು ಶೇ.5.4ರಷ್ಟು ಇರಲಿದೆ ಎಂದು ಈ ಮೊದಲು ಮಾಡಿದ್ದ ಅಂದಾಜಿನಲ್ಲಿ ಸಂಸ್ಥೆಯು ಬದಲಾವಣೆ ತಂದಿಲ್ಲ.

# ಸಣ್ಣ ತೆರಿಗೆ ಪಾವತಿದಾರರಿಗೆ ನೆಮ್ಮದಿ ನೀಡಿದ ನೇರ ತೆರಿಗೆಗಳ ಮಂಡಳಿ

**ಹೊಸದಿಲ್ಲಿ :** 2013–14, 2014–15 ಮತ್ತು 2015–16 ಈ ಮೂರು ಅಸೆಸ್‌ಮೆಂಟ್ ವರ್ಷಗಳಲ್ಲಿ (ಎವೈ) ಹೆಚ್ಚಿನ ಆದಾಯ ಹೊಂದಿದ್ದರೂ, 50 ಲಕ್ಷ ರೂ.ಗಿಂತಲೂ ಕಡಿಮೆ ಮೊತ್ತದ ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿದ್ದವರಿಗೆ ಈಗ ತುಸು ನಿರಾಳ ನೀಡುವಂಥ ಸುದ್ದಿ ಬಂದಿದೆ.



ಈ ಮೂರು ಅಸೆಸ್‌ಮೆಂಟ್ ವರ್ಷಗಳಲ್ಲಿ ತೆರಿಗೆ ಮೊತ್ತವು 50 ಲಕ್ಷ ರೂ.ಗಳಿಗಿಂತಲೂ ಕಡಿಮೆಯಿದ್ದರೆ ಆ ವರ್ಷಗಳಿಗೆ ಮರುಮೌಲ್ಯಮಾಪನ ನೋಟಿಸ್ ನೀಡದಂತೆ ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಆದಾಯ ತೆರಿಗೆ ಇಲಾಖೆಯ ಕ್ಷೇತ್ರ ಕಚೇರಿಗಳಿಗೆ ಸೂಚನೆ ನೀಡಿದೆ.

ಸಿಬಿಡಿಟಿಯ ಸುತ್ತೋಲೆಯು ತೆರಿಗೆ ಪಾವತಿದಾರರು ಮತ್ತು ತೆರಿಗೆ ಅಧಿಕಾರಿಗಳು ಇಬ್ಬರಿಗೂ ಸ್ಪಷ್ಟನೆ ನೀಡುವಂತಿದೆ. ಇದು ಒಳ್ಳೆಯ ಕ್ರಮ, ಎಂದು ನಾಂಗಿಯಾ ಆಂಡ್ ಕಂಪನಿ ಮುಖ್ಯಸ್ಥ ಶೈಲೇಶ್ ಕುಮಾರ್ ಹೇಳಿದ್ದಾರೆ. 2016–17 ಮತ್ತು 2017–18ರ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದ ಪ್ರಕರಣಗಳಿಗೆ ನೋಟಿಸ್ ನೀಡಲು ಇಲಾಖೆ ಸೂಚಿಸಿದೆ. ನೋಟಿಸ್ ನೀಡಿದ 30 ದಿನಗಳಲ್ಲಿ ವಿಚಾರಣಾ ಪ್ರಕ್ರಿಯೆ ನಡೆಯಲಿದೆ.

**ಏನಿದು ತೆರಿಗೆ ಸಂಗತಿ :** ಮೊದಲು 3 ವರ್ಷಗಳ ಹಿಂದಿನ ಕೇಸ್‌ಗಳ ಮರು ಮೌಲ್ಯಮಾಪನಕ್ಕೆ ಅವಕಾಶವಿತ್ತು. ಅದನ್ನು 6 ವರ್ಷಗಳಿಗೆ ಕಳೆದ ವರ್ಷದ ಬಜೆಟ್‌ನಲ್ಲಿ ಹೆಚ್ಚಳ ಮಾಡಿತ್ತು. ಇದರನ್ವಯ ಆರು ವರ್ಷಗಳ ಹಿಂದಿನ ಆದಾಯ ತೆರಿಗೆ ಮೌಲ್ಯಮಾಪನದ ಪ್ರಕರಣಗಳನ್ನು ಇಲಾಖೆಯು ಮರು ಪರಾಮರ್ಶೆಗೆ ಒಡ್ಡಿತ್ತು. ಇದನ್ನು ಪ್ರಶ್ನಿಸಿ ತೆರಿಗೆದಾರರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂ ತೀರ್ಪಿನ ಹಿನ್ನೆಲೆಯಲ್ಲಿ ಸಿಬಿಡಿಟಿ, ತೆರಿಗೆ ಇಲಾಖೆಯ ಕ್ಷೇತ್ರ ಅಧಿಕಾರಿಗಳಿಗೆ ಮರು ಮೌಲ್ಯಮಾಪನದ ನೋಟಿಸ್‌ಗಳನ್ನು ನೀಡದಂತೆ ಸೂಚನೆಗಳನ್ನು ರವಾನಿಸಿದೆ.

# ಜೂನ್ 2022 ರಿಂದ ಪ್ರಮುಖ 5 ವೈಯಕ್ತಿಕ ಹಣಕಾಸು ಬದಲಾವಣೆ ತಿಳಿಯಿರಿ

ಮಯೂರಿ ಎನ್.

ಜೂನ್ ತಿಂಗಳಿನಲ್ಲಿ ಆಗುವ ಈ ವೈಯಕ್ತಿಕ ಹಣಕಾಸು ಬದಲಾವಣೆಗಳು ನಮ್ಮ ವೈಯಕ್ತಿಕ ಹಣಕಾಸು ನಿರ್ವಹಣೆ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ವಿಶೇಷವಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗೃಹ ಸಾಲ ಪಡೆದಿರುವವರು, ಆಕ್ಸಿಸ್ ಬ್ಯಾಂಕ್ ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಗ್ರಾಹಕರು, ವಾಹನ ಮಾಲೀಕರಿಗೆ ಪ್ರಮುಖ ಪ್ರಭಾವ ಉಂಟಾಗಲಿದೆ. ಏಕೆಂದರೆ ಜೂನ್‌ನಲ್ಲಿ ಜಾರಿಗೆ ಬರಲಿರುವ ಈ ಬದಲಾವಣೆಗಳು ಈ ಜನರ ಹಣಕಾಸಿನ ಮೇಲೆ ಪರಿಣಾಮ ಉಂಟು ಮಾಡಲಿದೆ. ನಿಮ್ಮ ಆರ್ಥಿಕ ಜೀವನದ ಮೇಲೆ ಪರಿಣಾಮ ಬೀರುವ ಜೂನ್‌ನಿಂದ ಜಾರಿಗೆ ಬರಲಿರುವ ಐದು ಪ್ರಮುಖ ವೈಯಕ್ತಿಕ ಹಣಕಾಸು ಬದಲಾವಣೆಗಳನ್ನು ಈಗಲೇ ತಿಳಿದರೆ ಅದರ ನಿರ್ವಹಣೆಗೆ ದಾರಿ ಕಾಣಬಹುದು. ಈ ಬದಲಾವಣೆಗಳು ಯಾವುದು ಎಂದು ಇಲ್ಲಿ ವಿವರಿಸಲಾಗಿದೆ ಮುಂದೆ ಓದಿ...

**ಎಸ್‌ಬಿಐನ ಗೃಹ ಸಾಲದ ಬಡ್ಡಿದರ ಹೆಚ್ಚಳ :** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ತನ್ನ ಗೃಹ ಸಾಲದ ಇಬಿಎಲ್‌ಆರ್ ಅನ್ನು 40 ಬೇಸಿಸ್ ಪಾಯಿಂಟ್ ಹೆಚ್ಚಳ ಮಾಡಿದೆ. ಈ ಪರಿಷ್ಕರಣೆಯ ಬಳಿಕ ಎಸ್‌ಬಿಐ ಗೃಹ ಸಾಲದ ಬಡ್ಡಿದರ 7.05 ಪ್ರತಿಶತಕ್ಕೆ ಹೆಚ್ಚಾಗಿದೆ. ಆದರೆ ಆರ್‌ಎಲ್‌ಎಲ್‌ಆರ್ 6.65 ಪ್ರತಿಶತ ಪ್ಲಸ್ ಸಿಆರ್‌ಪಿ ಆಗಿದೆ. ಎಸ್‌ಬಿಐನ ವೆಬ್‌ಸೈಟ್ ಪ್ರಕಾರ, ಹೆಚ್ಚಿದ ಬಡ್ಡಿದರಗಳು ಜೂನ್ 1, 2022 ರಂದು ಜಾರಿಗೆ ಬರುತ್ತವೆ. ಈ ಹಿಂದೆ ಇಬಿಎಲ್‌ಆರ್ ಶೇಕಡ 6.65ರಷ್ಟಿದ್ದರೆ, ರೆಪೊ-ಲಿಂಕ್ಡ್ ಲೆಂಡಿಂಗ್ ದರ (ಆರ್‌ಎಲ್‌ಎಲ್‌ಆರ್) ಶೇಕಡ 6.25 ರಷ್ಟಿತ್ತು. ಇನ್ನು ಎಸ್‌ಬಿಐ ಎಂಸಿಎಲ್‌ಆರ್ ಅನ್ನು ಕೂಡಾ ಹತ್ತು ಮೂಲಾಂಕ ಏರಿಕೆ ಮಾಡಿದೆ. ಮೇ 15, 2022 ರಿಂದ, ಹೊಸ ಎಂಸಿಎಲ್‌ಆರ್ ಬಡ್ಡಿ ದರಗಳು ಜಾರಿಯಲ್ಲಿರುತ್ತವೆ.

**ಥರ್ಡ್ ಪಾರ್ಟಿ ಮೋಟಾರು ವಿಮಾ ಕಂತುಗಳು ಅಧಿಕ :** ರಸ್ತೆ, ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಅಧಿಸೂಚನೆಯ ಪ್ರಕಾರ 1000 ಸಿಸಿ ಮೀರದ ಖಾಸಗಿ ಕಾರುಗಳಿಗೆ ಥರ್ಡ್-ಪಾರ್ಟಿ ವಿಮೆಯ ವಾರ್ಷಿಕ ದರವನ್ನು 2019-20ರಲ್ಲಿ ರೂ. 2,072 ರಿಂದ ರೂ. 2,094ಗೆ ನಿಗದಿಪಡಿಸಲಾಗಿದೆ. ಹೊಸ ದರಗಳ ಅಡಿಯಲ್ಲಿ, 1000 ಸಿಸಿ ಮತ್ತು 1500 ಸಿಸಿ ನಡುವಿನ ಎಂಜಿನ್ ಸಾಮರ್ಥ್ಯದ ಖಾಸಗಿ ಕಾರುಗಳಿಗೆ ಥರ್ಡ್ ಪಾರ್ಟಿ ವಿಮೆ 2019-20ರಲ್ಲಿ ರೂ. 3,221 ರಿಂದ ರೂ. 3,416ಕ್ಕೆ ಹೆಚ್ಚಿಸಲಾಗಿದೆ. 1500 ಸಿಸಿಗಿಂತ ಹೆಚ್ಚಿನ ಎಂಜಿನ್ ಸಾಮರ್ಥ್ಯವನ್ನು ಹೊಂದಿರುವ ದೊಡ್ಡ ಖಾಸಗಿ ವಾಹನಗಳ ಪ್ರೀಮಿಯಂಗಳು ರೂ. 7,890 ರಿಂದರೂ 7,897ಕ್ಕೆ ತಲುಪಿದೆ. ಇನ್ನು 150 ಸಿಸಿಗಿಂತ ಹೆಚ್ಚಿನ ಆದರೆ 350 ಸಿಸಿಗಿಂತ ಕಡಿಮೆಯ ದ್ವಿಚಕ್ರ ವಾಹನಗಳಿಗೆ ವಿಮಾ ಪ್ರೀಮಿಯಂ ರೂ. 1,366 ಆಗಿರುತ್ತದೆ. 350 ಸಿಸಿಗಿಂತ ಹೆಚ್ಚಿನ ದ್ವಿಚಕ್ರ ವಾಹನಗಳು ರೂ. 2,804 ಪ್ರೀಮಿಯಂ ಅನ್ನು ಕಟ್ಟಬೇಕಾಗುತ್ತದೆ. 1000 ಸಿಸಿ ಮೀರದ ಹೊಸ ಕಾರಿಗೆ ಮೂರು ವರ್ಷಗಳ ಸಿಂಗಲ್ ಪ್ರೀಮಿಯಂ ಅನ್ನು 6,521 ರೂ.ಗೆ ನಿಗದಿಪಡಿಸಲಾಗಿದೆ. 1000 ಸಿಸಿ ಮತ್ತು 1500 ಸಿಸಿ ನಡುವಿನ ಕಾರಿಗೆ 10,640 ರೂ. ವಿಮೆ ಮೊತ್ತವಾಗಿದೆ. 1500 ಸಿಸಿಗಿಂತ ಹೆಚ್ಚಿನ ಹೊಸ ಖಾಸಗಿ ವಾಹನವನ್ನು ಮೂರು ವರ್ಷಗಳವರೆಗೆ ರೂ 24,596ಕ್ಕೆ ವಿಮೆ ಮಾಡಲಾಗುವುದು. ದರಗಳನ್ನು



2019-20 ಹಣಕಾಸು ವರ್ಷದ ಕೊನೆಯಲ್ಲಿ ಪರಿಷ್ಕರಿಸಲಾಗಿದೆ. ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಬದಲು ಮಾಡಲಾಗಿಲ್ಲ. ಆದರೆ ಈ ಪರಿಷ್ಕೃತ ದರಗಳು ಜೂನ್ 1, 2022 ರಿಂದಅನ್ವಯವಾಗುತ್ತವೆ.

**ಚಿನ್ನದ ಹಾಲ್ ಮಾರ್ಕಿಂಗ್ :** ಜೂನ್ 1, 2022 ರಿಂದ, ಎರಡನೇ ಹಂತದ ಕಡ್ಡಾಯ ಹಾಲ್ ಮಾರ್ಕಿಂಗ್ ಜಾರಿಗೆ ಬರಲಿದೆ. ಅಸ್ತಿತ್ವದಲ್ಲಿರುವ 256 ಜಿಲ್ಲೆಗಳು ಮತ್ತು 32 ಹೊಸ ಜಿಲ್ಲೆಗಳಲ್ಲಿ ಅಸ್ಸೇಯಿಂಗ್ ಮತ್ತು ಹಾಲ್ ಮಾರ್ಕಿಂಗ್ ಸೆಂಟರ್ (AHC) ವ್ಯಾಪ್ತಿಗೆ ಬರುವ ಚಿನ್ನದ ಆಭರಣಗಳು/ಕಲಾಕೃತಿಗಳ ಹಾಲ್ ಮಾರ್ಕಿಂಗ್ ಅನ್ನು ಸಂಪೂರ್ಣವಾಗಿ ಕಡ್ಡಾಯಗೊಳಿಸುತ್ತದೆ. ಈ 288 ಜಿಲ್ಲೆಗಳಲ್ಲಿ 14, 18, 20, 22, 23 ಮತ್ತು 24 ಕ್ಯಾರೆಟ್ ತೂಕದ ಚಿನ್ನಾಭರಣಗಳು ಮತ್ತು ಪ್ರಾಚೀನ ವಸ್ತುಗಳನ್ನು ಮಾತ್ರ ಮಾರಾಟ ಮಾಡಲಾಗುವುದು. ಅವುಗಳನ್ನು ಕಡ್ಡಾಯವಾಗಿ ಹಾಲ್ ಮಾರ್ಕಿಂಗ್‌ನೊಂದಿಗೆ ಮಾರಾಟ ಮಾಡಬೇಕಾಗಿದೆ.

**ಆಧಾರ್ ಸಕ್ರಿಯಗೊಳಿಸಿದ ಪಾವತಿಗಳಿಗೆ ಶುಲ್ಕ ವಿಧಿಸುವ ಈ ಬ್ಯಾಂಕ್ :** ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (IPPB) ಆಧಾರ್ ಸಕ್ರಿಯಗೊಳಿಸಿದ ಪಾವತಿಗೆ (ಎಇಪಿಎಸ್) ಶುಲ್ಕವನ್ನು ವಿಧಿಸಲಾಗುತ್ತದೆ ಎಂದು ಹೇಳಿದೆ. ಈ ಶುಲ್ಕಗಳನ್ನು ಜೂನ್ 15, 2022 ರಂದು ಜಾರಿಗೆ ತರಲಾಗುತ್ತದೆ. ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಭಾರತೀಯ ಅಂಚೆಯ ಅಂಗಸಂಸ್ಥೆಯಾಗಿದ್ದು, ಇದನ್ನು ಅಂಚೆ ಇಲಾಖೆಯು ನಿರ್ವಹಣೆ ಮಾಡುತ್ತದೆ. ಎಇಪಿಎಸ್ ನಗದು ಹಿಂಪಡೆಯುವಿಕೆ, ಎಇಪಿಎಸ್ ನಗದು ಠೇವಣಿ ಸೇರಿದಂತೆ ಪ್ರತಿ ತಿಂಗಳು ಮೊದಲ ಮೂರು ಎಇಪಿಎಸ್ ವಹಿವಾಟುಗಳು ಉಚಿತವಾಗಿರುತ್ತದೆ. ಉಚಿತ ವಹಿವಾಟಿನ ಬಳಿಕ ನಡೆಸುವ ಎಲ್ಲಾ ವಹಿವಾಟಿಗೆ ಶುಲ್ಕವನ್ನು ವಿಧಿಸಲಾಗುತ್ತದೆ. ಪ್ರತಿ ನಗದು ಹಿಂಪಡೆಯುವಿಕೆ ಅಥವಾ ನಗದು ಠೇವಣಿಗೆ ರೂ. 20 ಮತ್ತು ಜಿಎಸ್‌ಟಿ ಪಾವತಿ ಮಾಡಬೇಕಾಗುತ್ತದೆ. ಮಿನಿ ಸ್ಟೇಟ್ ಮೆಂಟ್ ವಹಿವಾಟಿಗೆ ರೂ. 5 ಮತ್ತು ಜಿಎಸ್‌ಟಿ ವೆಚ್ಚವಾಗುತ್ತದೆ.

**ಆಕ್ಸಿಸ್ ಬ್ಯಾಂಕ್‌ನ ಪರಿಷ್ಕೃತ ಉಳಿತಾಯ ಖಾತೆ ಶುಲ್ಕ :** ಸೆಮಿ ಅರ್ಬನ್/ ಗ್ರಾಮೀಣ ಪ್ರದೇಶಗಳಲ್ಲಿ ಉಳಿತಾಯ ಖಾತೆಗೆ ಸರಾಸರಿ ಮಾಸಿಕ ಬಾಕಿ ಅಗತ್ಯವನ್ನು ರೂ.15,000 ರಿಂದ ರೂ. 25,000 ಅಥವಾ ರೂ. 1 ಲಕ್ಷ ಅವಧಿಯ ಠೇವಣಿಗೆ ಹೆಚ್ಚಿಸಲಾಗಿದೆ. ಲಿಬರ್ಟಿ ಉಳಿತಾಯ ಖಾತೆಗೆ, ಅಗತ್ಯವನ್ನು 15,000 ರೂಪಾಯಿಯಿಂದ 25,000 ರೂಪಾಯಿಗೆ ಏರಿಕೆ ಮಾಡಲಾಗಿದೆ. ಈ ಸುಂಕಗಳು ಜೂನ್ 1, 2022 ರಿಂದ ಜಾರಿಯಲ್ಲಿರುತ್ತವೆ.

# ಹೆಚ್ಚಿನ ಹಣದುಬ್ಬರಕ್ಕೆ ನಾಂದಿ ಹಾಡಲಿದೆ ರೂಪಾಯಿ ಕುಸಿತ

ಜಾಗತಿಕ ಮಟ್ಟದಲ್ಲಿ ಡಾಲರ್ ಎದುರು ಭಾರತದ ರೂಪಾಯಿ ಭಾರಿ ಪ್ರಮಾಣದ ಕುಸಿತ ಕಂಡು ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ನಿನ್ನೆ ತನಕ ಒಂದು ಡಾಲರ್ ಕೊಳ್ಳಲು ನಾವು 73 ರೂಪಾಯಿ ಕೊಟ್ಟರೆ ಸಾಕಾಗುತ್ತಿತ್ತು. ಇವತ್ತು ಅದೇ ಡಾಲರಿಗೆ ನಾವು ಬರೋಬ್ಬರಿ 77 ರೂಪಾಯಿ ತೆರಬೇಕು.

ಗಮನಿಸಿ ನೋಡಿ ಸೇವೆ ಅಥವಾ ಸರಕಿನಲ್ಲಿ ಯಾವುದೇ ವ್ಯತ್ಯಾಸವಾಗದೆ ಇದ್ದರೂ ಸಹ ಒಂದು ಡಾಲರಿಗೆ ನಾಲ್ಕು ರೂಪಾಯಿ ಹೆಚ್ಚಳ ಖಂಡಿತ ದೊಡ್ಡ ಮೊತ್ತ. ಇಲ್ಲಿ ಇನ್ನೊಂದು ಅಂಶವನ್ನ ಗಮನಿಸಿ ಇದರಲ್ಲಿ ಕೇಂದ್ರ ಸರಕಾರ ಅಥವಾ ಯಾವುದೇ ರಾಜ್ಯ ಸರಕಾರಗಳ ತಪ್ಪಿಲ್ಲ. ಇಲ್ಲಿನ ಪ್ರಜೆಗಳ ತಪ್ಪು ಕೂಡ ಇಲ್ಲ. ಹಾಗಾದರೆ ಏನೂ ವ್ಯತ್ಯಾಸವಾಗದೆ ನಾವೇಕೆ ಹೆಚ್ಚಿನ ಮೊತ್ತ ತೆರಬೇಕು? ಎನ್ನುವ ಪ್ರಶ್ನೆ ಸಹಜವಾಗೇ ಉದ್ಭವವಾಗುತ್ತದೆ ಅಲ್ಲವೇ?. ಈ ರೀತಿ ರೂಪಾಯಿ ಅಪಮೌಲ್ಯಕ್ಕೆ ಕಾರಣವೇನು? ತಿಳಿದುಕೊಳ್ಳುವ ಪ್ರಯತ್ನವನ್ನ ಮಾಡೋಣ. ನಂತರ ಹೀಗೆ ರೂಪಾಯಿ ಅಪಮೌಲ್ಯವಾದರೆ ಆಗುವ ಪರಿಣಾಮಗಳ ಬಗ್ಗೆ ಒಂದಷ್ಟು ತಿಳಿದುಕೊಳ್ಳೋಣ. ಈ ರೀತಿಯ ಕುಸಿತ ಕೇವಲ ಭಾರತೀಯ ರುಪಾಯಿಗೆ ಮಾತ್ರ ಸೀಮಿತವೇ ಅಥವಾ ಬೇರೆ ದೇಶಗಳ ಹಣ ಕೂಡ ಅಪಮೌಲ್ಯ ಕಂಡಿವೆಯೇ? ಕಂಡಿದ್ದರೆ ಭಾರತವೆಲ್ಲಿ ನಿಂತಿದೆ ಎನ್ನುವುದರ ಬಗ್ಗೆ ಸ್ವಲ್ಪ ಅರಿತುಕೊಳ್ಳುವ ಪ್ರಯತ್ನವನ್ನ ಮಾಡೋಣ.

**ರೂಪಾಯಿ ಅಪಮೌಲ್ಯಕ್ಕೆ ಕಾರಣಗಳೇನು? :** ಎಲ್ಲಕ್ಕೂ ಮೊದಲನೆಯದಾಗಿ ಡಾಲರ್ ಅನ್ನು ಜಾಗತಿಕ ಹಣ ಎಂದು ಒಪ್ಪಿಕೊಂಡಿರುವುದು ಕಾರಣ. ಅಂದರೆ ಗಮನಿಸಿ ನಾವು ಕೊಳ್ಳುವ ತೈಲೋತ್ಪನ್ನಗಳು ಮತ್ತಿತರೇ ಆಮದು ಎಲ್ಲವನ್ನೂ ನಾವು ಭಾರತೀಯ ರೂಪಾಯಿ ಕೊಟ್ಟು ಕೊಳ್ಳುವುದು ಸಾಧ್ಯವಿಲ್ಲ. ಜಗತ್ತಿನ ಬಹುತೇಕೆ ದೇಶಗಳು ಡಾಲರ್ ಅನ್ನು ವಿನಿಮಯ ಹಣವನ್ನಾಗಿ ಬಳಸುತ್ತವೆ. ಹೀಗಾಗಿ ನಾವು ನೀಡುವ ಹಣ ಡಾಲರ್. ಒಂದು ಡಾಲರ್ ಹಣ ಇಷ್ಟು ರುಪಾಯಿಗೆ ಸಮ ಎಂದು ಒಂದು ನಿಗದಿತ ಮೊತ್ತವಿಲ್ಲ. ಇವುಗಳ ನಡುವಿನ ಮೌಲ್ಯಗಳಿಗೆ ಗಳಿಗೆಗೂ ಬದಲಾಗುತ್ತ ಇರುತ್ತದೆ. ಡಾಲರ್‌ನಲ್ಲಿ ನಾವು ವಹಿವಾಟು ಮಾಡುವುದಿಲ್ಲ ಎಂದು ಎರಡನೇ ಮಹಾಯುದ್ಧದ ನಂತರ ಸ್ಪಷ್ಟವಾಗಿ ಧ್ವನಿಯೆತ್ತಿದ್ದರೆ ಇಂದು ಈ ದಿನವನ್ನ ನಾವು ನೋಡುವ ಪ್ರಮೇಯ ಬರುತ್ತಿರಲಿಲ್ಲ. ಎರಡನೇ ಮಹಾಯುದ್ಧದ ನಂತರ ಜಾಗತಿಕ ಮಟ್ಟದಲ್ಲಿ ನಡೆದ ಸಭೆಯಲ್ಲಿ ಯಾರ ಬಳಿ ಹೆಚ್ಚು ಚಿನ್ನವಿರುತ್ತದೆ ಅವರ ಹಣವನ್ನ ಜಾಗತಿಕ ಹಣ ಎಂದು ಘೋಷಿಸುವುದಾಗಿ ತೀರ್ಮಾನ ತೆಗೆದುಕೊಳ್ಳುತ್ತಾರೆ . ಹೀಗಾಗಿ ಅಂದಿಗೆ ಹೆಚ್ಚಿನ ಗೋಲ್ಡ್ ರಿಸರ್ವ್ ಹೊಂದಿದ್ದ ಅಮೇರಿಕಾ ಸುಲಭವಾಗಿ ದೊಡ್ಡಣ್ಣನ ಪಟ್ಟವನ್ನ ಪಡೆದುಕೊಂಡು ಬಿಡುತ್ತದೆ. ಆ ನಂತರದ್ದು ದಿನ ನಿತ್ಯದ ಡಬಲ್ ಸ್ಟ್ಯಾಂಡರ್ಡ್ ಕಥೆಗಳು. ಎಲ್ಲಾ ಸನ್ನಿವೇಶಗಳನ್ನ ತನ್ನ ಒಳಿತಿಗೆ ಬಳಸಿಕೊಂಡ ಅಮೇರಿಕಾ ಬೆಳೆದು ನಿಂತದ್ದು ಇಂದಿಗೆ ಇತಿಹಾಸ.

ಎರಡನೆಯದಾಗಿ ಭಾರತದಲ್ಲಿ ಹೂಡಿಕೆ ಮಾಡಿರುವ ವಿದೇಶಿಯರು, ಸಂಸ್ಥೆಗಳು ಇಂದಿಗೆ ಮತ್ತೆ ಮರಳಿ ಅಮೇರಿಕಾ ಕಡೆಗೆ ಮುಖ ಮಾಡಿದ್ದಾರೆ. ಈ ಹೂಡಿಕೆದಾರರು ಪಾರಿವಾಳಗಳು ಇದ್ದಹಾಗೆ ಎಲ್ಲಿ ಹೆಚ್ಚಿನ ಕಾಳಿನ ವಾಸನೆ ಬರುತ್ತದೆ ಅಲ್ಲಿಗೆ ಹಾರಿ ಬಿಡುತ್ತಾರೆ. ಈಗ ಆಗಿರುವುದು ಕೂಡ ಅದೇ, ಭಾರತದಲ್ಲಿ ಸಿಗುತ್ತಿರುವ ಬಡ್ಡಿ ಅಥವಾ ಡಿವಿಡೆಂಡ್ ಡಾಲರ್ಗೆ ಪರಿವರ್ತಿಸಿ, ಇಲ್ಲಿನ ತೆರಿಗೆಯನ್ನ ಕಟ್ಟಿ ಉಳಿದದ್ದು ನೋಡಿದರೆ ಅವರಿಗೆ ಸಿಗುತ್ತಿರುವ



ಲಾಭಾಂಶ ಬಹಳ ಕಡಿಮೆ. ಇದೀಗ ಅಮೇರಿಕಾದಲ್ಲಿ ಫೆಡರಲ್ ಬಡ್ಡಿ ದರವನ್ನ ಹೆಚ್ಚಿಸಲಾಗಿದೆ. ಹೀಗಾಗಿ ಹೂಡಿಕೆದಾರರು ಮರಳಿ ಅಮೆರಿಕಾದ ಡೆಟ್ ಬಾಂಡ್ ಕಡೆಗೆ ಮುಖ ಮಾಡಿದ್ದಾರೆ. ಭಾರತದ ಷೇರು ಮಾರುಕಟ್ಟೆಯಿಂದ ಅತಿದೊಡ್ಡ ಪ್ರಮಾಣದಲ್ಲಿ ಹಣವನ್ನ ಹೊರತೆಗೆದು ಅದನ್ನ ಭಾರತದಿಂದ ಹೊರಕ್ಕೆ ಕಳಿಸಲಾಗುತ್ತಿದೆ. ಅಂದರೆ ಗಮನಿಸಿ ಕಳೆದ ಮೂರ್ನಾಲ್ಕು ತಿಂಗಳಿಂದ ವಿದೇಶಿ ಬಂಡವಾಳವನ್ನ ಹೊರತೆಗೆದು ಅದನ್ನ ಭಾರತದಿಂದ ಹೊರಕ್ಕೆ ಕಳಿಸುವ ಕೆಲಸ ಅವ್ಯಾಹತವಾಗಿ ನಡೆಯುತ್ತಿದೆ. ಹೀಗೆ ಹಣದ ಹರಿವು ಹೊರಮುಖವಾಗಿರುವ ಕಾರಣ ಭಾರತದ ರೂಪಾಯಿ ಡಾಲರ್ ಎದುರು ಕುಸಿತ ಕಂಡಿದೆ.

ಮೂರನೆಯದಾಗಿ ಭಾರತದಲ್ಲಿ ಹೆಚ್ಚಾಗಿರುವ ಹಣದುಬ್ಬರವನ್ನ ಗಮನಿಸಿಯೂ ಆರ್‌ಬಿಐ ಯಾವುದೇ ನಿರ್ಧಾರ ತೆಗೆದುಕೊಳ್ಳದೆ ರೆಪೋ ರೇಟ್ ಬಹಳ ಸಮಯದ ವರೆಗೆ ಯಥಾಸ್ಥಿತಿ ಕಾದುಕೊಂಡು ಬಂದಿತು. ಆರು ತಿಂಗಳು ಅಥವಾ ವರ್ಷಕ್ಕೆ ಮುನ್ನ ರೆಪೋ ರೇಟ್ ಏರಿಸದ ಕಾರಣ ಮತ್ತು ಒಂದೇ ಸಮನೆ ಏರುತ್ತಿರುವ ಹಣದುಬ್ಬರದ ಕಾರಣ ಹೂಡಿಕೆದಾರರ ಲಾಭಾಂಶದಲ್ಲಿ ಬಹಳ ಕುಸಿತವಾಯ್ತು. ಭಾರತದಂತಹ ಎಮರ್ಜಿಂಗ್ ಮಾರುಕಟ್ಟೆಯಲ್ಲಿ ಹಣ ಹೂಡುವುದು ಅಮೆರಿಕಾದಂತಹ ದೇಶದಲ್ಲಿ ಹೂಡಿಕೆ ಮಾಡುವುದಕ್ಕಿಂತ ಹೆಚ್ಚು ಅಪಾಯಕಾರಿ. ಹೆಚ್ಚಿನ ಅಪಾಯ ತೆಗೆದುಕೊಂಡು ಕೂಡ ನಿರೀಕ್ಷಿತ ಲಾಭ ಸಿಗದ ಕಾರಣ ಫಾರಿನ್ ಇನ್ಸಿಟ್ಯೂಷನಲ್ ಇನ್ವೆಸ್ಟರ್ಸ್ ಹಣವನ್ನ ಹೊರತೆಗೆಯುವ ನಿರ್ಧಾರ ಮಾಡಿದ್ದಾರೆ. ಹೀಗಾಗಿ ರೂಪಾಯಿ ಡಾಲರ್ ಎದುರು ಕುಸಿತ ಕಂಡಿದೆ.

ನಾಲ್ಕನೆಯದಾಗಿ ಅಮೇರಿಕಾ ಎಕಾನಮಿ ಕೂಡ ಸಂಕಷ್ಟದ ಬಾಗಿಲಿನಲ್ಲಿ ಸಾಗುತ್ತಿದೆ. ಹೀಗಾಗಿ ಅಲ್ಲಿನ ಸರಕಾರ, ಫೆಡರಲ್ ಬ್ಯಾಂಕು ಡಾಲರ್ ಮೌಲ್ಯವನ್ನ ಪುನಶ್ಚೇತನಗೊಳಿಸುವ ಕಾರ್ಯದಲ್ಲಿ ತೊಡಗಿತ್ತು. ಅದೀಗ ಫಲವನ್ನ ಕೊಡಲು ಶುರು ಮಾಡಿದೆ. ಅಂದರೆ ಭಾರತೀಯ ರೂಪಾಯಿ ಎಂದಿನ ಮೌಲ್ಯ ಕಾಯ್ದುಕೊಳ್ಳುವ ಕ್ಷಮತೆ ಹೊಂದಿದ್ದರೂ ಡಾಲರ್ ಬಲಿಷ್ಠವಾದ ಕಾರಣ ದಿಂದ ಕೂಡ ಅಪಮೌಲ್ಯ ಹೊಂದಿದೆ.

**ರೂಪಾಯಿ ಅಪಮೌಲ್ಯವಾದರೆ ಆಗುವ ಪರಿಣಾಮಗಳೇನು?**

**1. ಕಚ್ಚಾ ತೈಲದ ಬೆಲೆ ಇನ್ನಷ್ಟು ಏರಿಕೆಯಾಗುತ್ತದೆ :** ಗಮನಿಸಿ ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಹೆಚ್ಚಾಗದೇ ಹೋದರೂ ಕೂಡ ಭಾರತದಲ್ಲಿ ತೈಲ ಬೆಲೆ ಹೆಚ್ಚಾಗುತ್ತದೆ. ಜಾಗತಿಕ ಮಟ್ಟದಲ್ಲಿ ತೈಲ ಬೆಲೆ 3/4 ಪ್ರತಿಶತ ಕುಸಿತ ಕಂಡರೂ ಕೂಡ ನಮಗೆ ಬೆಲೆ ಇಳಿಕೆಯಾಗುವುದಿಲ್ಲ. ಏಕೆಂದರೆ ನಾವು ತೈಲೋತ್ಪನ್ನ

7ನೇ ಪುಟಕ್ಕೆ...

## ನಿಮ್ಮ ಪ್ರಶ್ನೆ ನಮ್ಮ ಉತ್ತರ







▸▸ ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಒಬ್ಬ ನಿರ್ದೇಶಕರು ಒಂದು ಪತ್ತಿನ ಸಹಕಾರ ಸಂಘದಿಂದ ಸಾಲ ಪಡೆದಿದ್ದು, ಸಾಲ ಸುಸ್ತಿಯಾಗಿರುವುದಾಗಿ ಆ ಸಹಕಾರ ಸಂಘದಿಂದ ನಮಗೆ ಪತ್ರ ಬಂದಿದೆ. ಈ ಸಂದರ್ಭದಲ್ಲಿ ನಮ್ಮ ಬ್ಯಾಂಕು ಕೈಗೊಳ್ಳಬೇಕಾದ ಕ್ರಮಗಳೇನು?**

**– ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ 2021ರಲ್ಲಿ ತಿದ್ದುಪಡಿಯಾಗಿದೆ. ಕಾಯ್ದೆಯ ಕಲಂ 17(2-A) ಪ್ರಕಾರ ಯಾರೇ ವ್ಯಕ್ತಿಯು ಒಂದೇ ಬಗೆಯ ವ್ಯವಹಾರ ನಡೆಸುತ್ತಿರುವ ಎರಡು ಅಥವಾ ಹೆಚ್ಚಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿರುವುದು ಕಂಡು ಬಂದಲ್ಲಿ ಆತ ಹೊಸದಾಗಿ ಯಾವ ಸಹಕಾರ ಸಂಘಕ್ಕೆ ಸೇರಿರುವನೋ ಅದರ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು. ಪತ್ತಿನ ಸಹಕಾರ ಸಂಘ ಬ್ಯಾಂಕಿನಂತಹ ವ್ಯವಹಾರ ನಡೆಸುತ್ತಿರುವುದರಿಂದ, ಆತ ಬ್ಯಾಂಕಿನಲ್ಲಿ ಸದಸ್ಯತ್ವ ಹೊಸದಾಗಿ ಪಡೆದಿದ್ದರೆ, ಆತನ ಬ್ಯಾಂಕಿನ ಸದಸ್ಯತ್ವ ಮತ್ತು ಮಂಡಳಿ ಸದಸ್ಯತ್ವ ನಿಂತು ಹೋಗಿದೆ ಎಂದು ಭಾವಿಸತಕ್ಕದ್ದು. ಕಾಯ್ದೆಯ ಕಲಂ 29–ಸಿ(1)(ಏ) ಪ್ರಕಾರ ಯಾರೇ ವ್ಯಕ್ತಿಯು ಋಣಿಯಾಗಿ ತನ್ನಿಂದ ಸಲ್ಲಿಸಬೇಕಾದ ಯಾವುದೇ ಬಾಕಿಗಳ ಸಂದರ್ಭದಲ್ಲಿ ಆ ಸಂಘಕ್ಕೆ ಅಥವಾ ಇತರ ಯಾವುದೇ ಸಹಕಾರ ಸಂಘಕ್ಕೆ ಸುಸ್ತಿದಾರನಾಗಿದ್ದರೆ ಆತ ಮಂಡಳಿಯ ಸದಸ್ಯನಾಗಿ ಮುಂದುವರೆಯಲು ಅರ್ಹನಾಗಿರತಕ್ಕದ್ದಲ್ಲ. ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ರಿಜಿಸ್ಟ್ರಾರರಿಗೆ ಇರುವುದರಿಂದ ಸಂಪೂರ್ಣ ಮಾಹಿತಿಯೊಂದಿಗೆ ವಿಷಯವನ್ನು ಅವರ ಅವಗಾಹನೆಗೆ ತನ್ನಿರಿ.

## ಸೈಬರ್ ದಾಳಿಯಿಂದ ವಂಚನೆಗೊಳಗಾದ ವ್ಯಕ್ತಿಗೆ ಪರಿಹಾರ ನೀಡುವಂತೆ ಎಸ್‌ಬಿಐಗೆ ಸೂಚಿಸಿದ ಗ್ರಾಹಕ ಆಯೋಗ




**ಹೈದರಾಬಾದ್ :** ಒಂಬತ್ತು ವರ್ಷಗಳ ಹಿಂದೆ ಸೈಬರ್ ದಾಳಿಯಿಂದ ವಂಚನೆಗೊಳಗಾದ ಗ್ರಾಹಕನಿಗೆ ಬಡ್ಡಿಯೊಂದಿಗೆ 1.46 ಲಕ್ಷ ರೂಪಾಯಿಗಳನ್ನು ಪಾವತಿಸುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಅಧಿಕಾರಿಗಳಿಗೆ ತೆಲಂಗಾಣ ಗ್ರಾಹಕರ ಆಯೋಗವು ಸೂಚಿಸಿದೆ. ಸೈಬರಾಬಾದ್‌ನ ಚೆರ್ಲಪಲ್ಲಿ ನಿವಾಸಿಯಾಗಿರುವ ಸಂತ್ರಸ್ತ ಎಂ.ಕೆ. ಮಿಶ್ರಾ 2013ರಲ್ಲಿ ಎಸ್‌ಬಿಐನಿಂದ 3 ಲಕ್ಷ ರೂಪಾಯಿ ವೈಯಕ್ತಿಕ ಸಾಲ ಮತ್ತು ಬ್ಯಾಂಕ್‌ನಿಂದ ಡೆಬಿಟ್ ಕಾರ್ಡ್ ಪಡೆದಿದ್ದರು.

2013ರ ಮೇ. 5–7ರ ನಡುವೆ ಸೈಬರ್ ದಾಳಿಕೋರರು ಮಿಶ್ರಾ ಅವರ ಡೆಬಿಟ್ ಕಾರ್ಡ್ ಮೂಲಕ 1.46 ಲಕ್ಷ ರೂ.ಗಳನ್ನು ಲಪಟಾಯಿಸಿದ್ದರು ಎಂದು ತಿಳಿದು ಬಂದಿದೆ. ಬಳಿಕ ಮಿಶ್ರಾ ಅವರು ಎಸ್‌ಬಿಐ ಅಧಿಕಾರಿಗಳಿಗೆ ಈ ಸಂಬಂಧ ದೂರು ನೀಡಿದ್ದಾರೆ. ಆದ್ರೆ ಅದಕ್ಕೆ ಅಧಿಕಾರಿಗಳು ಸ್ಪಂದಿಸದ ಕಾರಣ ಜಿಲ್ಲಾ ಗ್ರಾಹಕರ ವೇದಿಕೆ ಮೊರೆ ಹೋಗಿದ್ದರು. ಆಗ ಮಿಶ್ರಾ ಅವರಿಗೆ ಬಡ್ಡಿ ಸಹಿತ ಮೊತ್ತವನ್ನು ಎಸ್‌ಬಿಐ ಪಾವತಿಸಬೇಕು ಎಂದು ವೇದಿಕೆ ಆದೇಶಿಸಿತ್ತು.

...ನೇ ಪುಟದಿಂದ

ಕೊಳ್ಳಲು ನೀಡುವುದು ಡಾಲರ್. ಉದಾಹರಣೆ ನೋಡೋಣ. ನಾವು 1,000 ಡಾಲರ್ ತೈಲ ಕೊಂಡರೆ 73 ಸಾವಿರ ರೂಪಾಯಿ ಕೊಡಬೇಕಾಗಿತ್ತು. ಈಗ 77 ಸಾವಿರ. ಹೀಗಾಗಿ ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಹೆಚ್ಚಾಗದಿದ್ದರೂ ಕೂಡ ನಾವು ತೈಲಕ್ಕೆ ಹೆಚ್ಚಿನ ಬೆಲೆಯನ್ನ ತೆರಬೇಕಾಗುತ್ತದೆ.

**2. ಆಮದು ಬೆಲೆಯಲ್ಲಿ ಹೆಚ್ಚಳ :** ತೈಲದ ಮೇಲಿನ ಉದಾಹರಣೆಯನ್ನ ನೀವು ಎಲ್ಲಾ ಆಮದಿಗೂ ಅನ್ವಯಿಸಬಹುದು. ಎಲೆಕ್ಟ್ರಾನಿಕ್ ಉಪಕರಣಗಳು, ಆಟೋಮೊಬೈಲ್ ಹೀಗೆ ನಾವು ಹೊರ ದೇಶಗಳಿಂದ ಏನೆಲ್ಲಾ ಪದಾರ್ಥಗಳನ್ನ ತರಿಸಿಕೊಳ್ಳುತ್ತೇವೆ ಅವುಗಳ ಬೆಲೆಯಲ್ಲಿ ಹೆಚ್ಚಳವಾಗುತ್ತದೆ.

**3. ವಿದೇಶಿ ಸಾಲಗಳ ಮರುಪಾವತಿ :** ಭಾರತೀಯ ಸಬ್ಸಿಡರಿ ಸಂಸ್ಥೆಗಳ ಮೇಲೆ ಹೆಚ್ಚಿನ ಹೊಡೆತ ಬೀಳುತ್ತದೆ.

**4. ಮೇಲಿನ ಮೂರು ಕಾರಣಗಳು :** ಭಾರತದಲ್ಲಿ ಇನ್ನಷ್ಟು ಬೆಲೆಯೇರಿಕೆಗೆ ಕೂಡ ಕಾರಣವಾಗುತ್ತದೆ. ಸದ್ಯದ ಮಟ್ಟಿಗೆ ಕಾರ್ಪೊರೇಟ್ ಹೌಸ್‌ಗಳಿಗೆ ಹೆಚ್ಚು ಪೆಟ್ಟು ಎನ್ನುವಂತೆ ಕಂಡರೂ ಅವುಗಳು ತಮ್ಮ ಮೇಲೆ ಬಿದ್ದ ಹೆಚ್ಚಿನ ಹೊರೆಯನ್ನ ಗ್ರಾಹಕನಿಗೆ ವರ್ಗಾಯಿಸುತ್ತವೆ. ಹೀಗಾಗಿ ಮುಂದಿನ ಹದಿನೈದು ದಿನದಲ್ಲಿ ಬೆಲೆಯೇರಿಕೆಯ ಹೊಡೆತ ಜನ ಸಾಮಾನ್ಯ ಕೂಡ ಅನುಭವಿಸಲಿದ್ದಾನೆ.

**5. ಹೆಚ್ಚಿದ ಹಣದುಬ್ಬರ ಬಡ್ಡಿ ದರಗಳ ಏರಿಕೆಗೆ ಕಾರಣವಾಗುತ್ತದೆ :** ಬಡ್ಡಿದರ ಏರಿಕೆಯಾದರೆ ಡೆಟ್ ಮಾರುಕಟ್ಟೆಯಲ್ಲಿ ದುಬಾರಿಯಾಗಲಿದೆ. ಇದು ಕೈಗಾರಿಕಾ ಅಭಿವೃದ್ಧಿಗೆ ಒಳ್ಳೆಯ ಸುದ್ದಿಯಲ್ಲ.

**ಗಮನಿಸಿ ನೋಡಿ :** ಇವೆಲ್ಲವೂ ಚೈನ್ ಲಿಂಕ್ ಹೊಂದಿವೆ. ಇವುಗಳು ಎರಡು ಅಲುಗಿನ ಕತ್ತಿ ಇದ್ದಹಾಗೆ. ಸಮ ಬದ್ಧತೆ, ಲಯ ಕಾಪಾಡಿಕೊಳ್ಳದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ.

**ಕೊನೆಮಾತು :** ಹೀಗೆ ರೂಪಾಯಿ ಕುಸಿತವಾದಾಗ, ಹಣದುಬ್ಬರ ಹೆಚ್ಚಾದಾಗ ಭಾರತೀಯ ಸೆಂಟ್ರಲ್ ಬ್ಯಾಂಕ್ ಮಧ್ಯ ಪ್ರವೇಶ ಮಾಡುತ್ತದೆ, ಇನ್ನಷ್ಟು ಹೆಚ್ಚಿನ ಕುಸಿತವಾಗದಂತೆ ಅದು ನಿರ್ಧಾರಗಳನ್ನ ತೆಗೆದುಕೊಳ್ಳುತ್ತದೆ. ಇಲ್ಲಿಯವರೆಗೆ ಹೀಗೆ ಆಗುತ್ತಾ ಬಂದಿರುವುದು. ಹೀಗಾಗಿ ಸದ್ಯದ ಮಟ್ಟಿಗೆ ಪ್ಯಾನಿಕ್ ಬಟನ್ ಒತ್ತುವ ಅವಶ್ಯಕತೆಯಿಲ್ಲ. ಭಾರತ ಸರಕಾರ ಮತ್ತು ಸೆಂಟ್ರಲ್ ಬ್ಯಾಂಕ್ ಇದನ್ನ ಮರಳಿ ಟ್ರಾಕ್‌ಗೆ ತರುತ್ತವೆ. ಆದರೂ ಭಾರತದಲ್ಲಿ ಇನ್ನಷ್ಟು ತಿಂಗಳುಗಳ ಕಾಲ ಹಣದುಬ್ಬರದ ಹೊಡೆತ ಮಾತ್ರ ತಪ್ಪುವುದಿಲ್ಲ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಜಾರಿಗೆ ತರಲು ನಿರ್ಧರಿಸಿರುವ ಐಟಿಐ ಕಾಲೇಜಿನಲ್ಲಿ ಮೊದಲ ಹಂತದಲ್ಲಿ 6 ತಿಂಗಳ ಅಲ್ಪಾವಧಿ ಕೋರ್ಸ್, ಎರಡು ವರ್ಷಗಳ ಐಟಿಐ, ಎಲೆಕ್ಟ್ರಾನಿಕ್ಸ್ ಆರಂಭಿಸಲಾಗುತ್ತದೆ ಎಂದು ಕಾರಾಗೃಹ ಇಲಾಖೆ ತಿಳಿಸಿದೆ.
- ಹಳ್ಳಿಗಾಡಿನಲ್ಲಿ ಜಾನುವಾರುಗಳ ಸಂಖ್ಯೆ ಕಡಿಮೆಯಾಗಿದ್ದರಿಂದ ಕೊಟ್ಟಿಗೆ ಗೊಬ್ಬರದ ಸಂಗ್ರಹ ಕಡಿಮೆಯಾಗಿ ಖರೀದಿಸುವವರ ಸಂಖ್ಯೆ ಹೆಚ್ಚಾಗಿದ್ದರಿಂದ ಬೆಲೆ ಗಗನಕ್ಕೇರಿದ್ದು, ಒಂದು ಟ್ರ್ಯಾಕ್ಟರಿಗೆ ರೂ. 6000 ರಿಂದ ರೂ. 8000ವರೆಗೂ ಖರೀದಿಸಲಾಗುತ್ತಿದೆ.
- ವಿಧಾನಸೌಧದಲ್ಲಿ ಇನ್ಮುಂದೆ ಮಹಿಳಾ ದರ್ಬಾರ್ ಆರಂಭವಾಗಲಿದ್ದು, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ರಾಜ್ಯ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಹಾಗೂ ರಾಜ್ಯ ವಿಧಾನ ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಶಕ್ತಿ ಕೇಂದ್ರದ ಶಕ್ತಿಯಾಗಿ ಹೊಸ ದಾಖಲೆ ಸ್ಥಾಪಿಸಲಿದ್ದಾರೆ.
- ಹವಾಮಾನ ವೈಪರಿತ್ಯದಿಂದ ಭಾರತದಲ್ಲಿ ಎದುರಾಗುವ ಮಹಾ ಚಂಡಮಾರುತಗಳಿಂದ ದೇಶದ ಒಟ್ಟು ಜನಸಂಖ್ಯೆಯ ಶೇ.50 ರಿಂದ 80ರಷ್ಟು ಜನರು ಪ್ರವಾಹದ ಕರಾಳ ಅನುಭವ ಎದುರಿಸಬೇಕಾಗಬಹುದು ಎಂದು ತಜ್ಞರು ಹೇಳಿದ್ದಾರೆ.
- 26 ಸೈನಿಕರನ್ನು ಕರೆದೊಯ್ಯುತ್ತಿದ್ದ ಭಾರತೀಯ ಸೇನೆಯ ವಾಹನವೊಂದು ಲಡಾಖಿನ ತುರ್ತುಕ್ ವಲಯದಲ್ಲಿನ ಶ್ಯೋಕ್ ನದಿಗೆ ಉರುಳಿ ಬಿದ್ದ ಪರಿಣಾಮ ಕನಿಷ್ಠ ಏಳು ಮಂದಿ ಯೋಧರು ಜೀವ ಕಳೆದುಕೊಂಡಿದ್ದಾರೆ.
- ರಾಜಸ್ಥಾನದಲ್ಲಿ ಸರ್ಕಾರಿ ಶಾಲೆಯ ಪ್ರಾಂಶುಪಾಲರೊಬ್ಬರು ಹೆಂಡತಿ ತನಗೆ ಚಿತ್ರಹಿಂಸೆ ನೀಡುತ್ತಿದ್ದಾಳೆ ಎಂದು ಕೋರ್ಟ್ ಮೆಟ್ಟಿಲೇರಿದ್ದಾರೆ. ಹೆಂಡತಿ ಗಂಡನಿಗೆ ಕ್ರಿಕೆಟ್ ಬ್ಯಾಟಿನಿಂದ ಥಳಿಸಿದ್ದು, ಅವರಿಗೆ ಭದ್ರತೆ ಒದಗಿಸಲಾಗಿದೆ.
- ಮೊಬಿಲಿಟಿ ದೈತ್ಯ ಓಲಾ ಎಲೆಕ್ಟ್ರಿಕ್ ತನ್ನ ಕಾರ್ ಕಾರ್ಖಾನೆಗಳನ್ನು ಸ್ಥಾಪಿಸಲು ಭೂಮಿಗಾಗಿ ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ
ಮಹಾಮಂಡಳದಿಂದ ಮಡಿಕೇರಿಯಲ್ಲಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಜನ ಎಚ್ಚೆತ್ತುಕೊಳ್ಳಲಿ :** ಇತ್ತೀಚಿನ ದಿನಗಳಲ್ಲಿ ಸೈಬರ್ ವಂಚನೆ ಪ್ರಕರಣಗಳೂ ಹೆಚ್ಚಾಗುತ್ತಿವೆ. ಬ್ಯಾಂಕುಗಳಿಂದ ಹಿಡಿದು ಅನೇಕ ಹಣಕಾಸು ಸೇವಾ ಪೂರೈಕೆದಾರರು ಮತ್ತು ಸರ್ಕಾರದವರೆಗೆ, ಕಾಲಕಾಲಕ್ಕೆ ಜನರು ಆನ್‌ಲೈನ್ ವಂಚನೆಯ ಬಗ್ಗೆ ಎಚ್ಚರಿಸುತ್ತಿದ್ದರೂ ಜನ ಎಚ್ಚೆತ್ತುಕೊಳ್ಳದಿರುವುದು ಆಶ್ಚರ್ಯಕರ. ಈಗ ಗೃಹ ಸಚಿವಾಲಯ ಸಹಾಯವಾಣಿ ಸಂಖ್ಯೆ 1930 ಪರಿಚಯಿಸಿದೆ. ಇನ್ನು ಮುಂದಾದರೂ ಜನ ಎಚ್ಚೆತ್ತುಕೊಳ್ಳಲಿ.

**▸▸ ಚಂದ್ರಕುಮಾರ್ ವಿ.ಎಲ್., ಮೈಸೂರು.**

**ಆತಂಕಕಾರಿಯಾದ ವಿಷಯವಾಗಿದೆ :** ಡಾಲರ್ ಮೌಲ್ಯ ಹೆಚ್ಚಾಗಿರುವುದರಿಂದ ಬಂಡವಾಳ ಹೂಡುವವರು ಅತ್ತ ಗಮನ ಹರಿಸುವುದು ಸಹಜವಾಗಿದೆ. ಇದರಿಂದ ದೇಶದ ಷೇರುಪೇಟೆಗಳಿಂದ ವಿದೇಶಿ ಬಂಡವಾಳ ಹಿಂದಕ್ಕೆ ಪಡೆಯುವುದು ಹೆಚ್ಚಾಗಿದ್ದು ಈಗಾಗಲೆ ನಮ್ಮ ಷೇರುಪೇಟೆಯಿಂದ ಒಟ್ಟಾರೆ ರೂ. 1.63 ಲಕ್ಷ ಕೋಟಿಗೂ ಅಧಿಕ ಬಂಡವಾಳ ಹೊರಹೋಗಿರುವುದು ಆತಂಕಕಾರಿಯಾದ ವಿಷಯವಾಗಿದೆ.

**▸▸ ರಂಗನಾಥ್ ರಾವ್ ಪಿ.ಆರ್., ಬೆಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.